ದಿಃ 07.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರು ಎಸ್.ಎ.ಎಮ್. ರವರಿಂದ**

ನಾನು 1985-86 ರಲ್ಲಿ ಬಿ ಎಸ್ಸಿ ಪದವಿ ಮುಗಿಸಿರುತ್ತೇನೆ. ನಾನು ಇಂಡಿಯನ್ ಬ್ಯಾಂಕ್ ನಲ್ಲಿ ಕ್ಲರ್ಕ್ ಆಗಿ ಸೇರಿಕೊಂಡಿರುತ್ತೇನೆ. ಈಗ ನಿವೃತ್ತಿಯಾಗಿರುತ್ತೇನೆ. ನಾನು ಮೊದಲು ಕೆಲಸಕ್ಕೆ ಸೇರಿದಾಗ ನನ್ನ ತಿಂಗಳು ಸಂಬಳ 942 ರೂ. ಇರುತ್ತದೆ. ನನ್ನ ಪದವಿ ಪ್ರಮಾಣ ಪತ್ರ ನೀಡಿದ ನಂತರ ಸಂಬಳ ರೂ. 1200 ರಿಂದ 1300 ಆಗಿರುತ್ತದೆ. 2023 ಮೇ 31 ರಂದು ನನಗೆ ನಿವೃತ್ತಿಯಾಗಿರುತ್ತದೆ.

2. ನಾನು ನಿವೃತ್ತಿಯಾಗುವ ಕಾಲಕ್ಕೆ ನನ್ನ ತಿಂಗಳ ಸಂಬಳ ರೂ. 1, 42,0000/- ರೂ. ಇತ್ತು. ನಾನು ಬೆಂಗಳೂರಿನಲ್ಲಿ ಸ್ವಂತ ಮನೆ ಹೊಂದಿದ್ದೇನೆ ಎಂದರೆ ಸರಿ. ನಾನು 2000 ಇಸವಿನಲ್ಲಿ ಮನೆ ಕಟ್ಟಿಸಿರುತ್ತೇನೆ. ನನ್ನ ಮನೆ ಬೆಂಗಳೂರಿನ ಶ್ಯಾಂಪೂರ ದಲ್ಲಿ ಇರುತ್ತದೆ. ನಿಪಿ 10 ರಲ್ಲಿ ಬೆಂಗಳೂರಿನಲ್ಲಿರುವ ನನ್ನ ಮನೆಯನ್ನು ಸೇರಿಸಿಲ್ಲ. ವಾದಿ ಸ. ನಂ. 222 ಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದಾರೆ.

3. ಸ. ನಂ. 222 ರ ಹಳೇ ಸ. ನಂ. ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕು ಬಂದಿ ಪೂ- ಜಿ. ತಿಪ್ಪೇನಾಯ್ಕು, ಪ- ಹಿರಾಮನಾಯ್ಕು, ಉ- ದೊಡ್ಡ ರವಣಪ್ಪ ಸ್ವತ್ತು, ದ- ಗಣೇ ನಾಯ್ಕ ಸ್ವತ್ತು ಇರುತ್ತದೆ. ನಾನು ಹೇಳಿದ ಚಕ್ಕು ಬಂದಿ ತಪ್ಪು ಎಂದರೆ ಸರಿಯಲ್ಲ. ಪೂ- ತಿಪ್ಪಣ್ಣ ಮತ್ತು ರವಣಪ್ಪ ರವರ ಸ್ವತ್ತು ಎಂದರೆ, ತಿಪ್ಪೇನಾಯ್ಕರವರ ಸ್ವತ್ತು ಇರುತ್ತದೆ. ದಾದು ನಾಯ್ಕ ನನ್ನ ತಾತಾ. ದಾದು ನಾಯ್ಕನ ಹೆಂಡತಿ ಹೆಸರು ಅಚ್ಚಮ್ಮ. ದಾದು ನಾಯ್ಕನ ಅಣ್ಣನ ಹೆಸರು ನನಗೆ ಗೊತ್ತಿಲ್ಲ. ಅವರ ಅಣ್ಣನ ಹೆಸರು ಬಿ. ಕೆ. ನಾಯ್ಕ ಇರಬಹುದು. ಬಿ. ಕೆ. ನಾಯ್ಕರವರ ಹೆಂಡತಿ ಹೆಸರು ಪೀಕಲಮ್ಮ ಎಂದರೆ ನನಗೆ ಗೊತ್ತಿಲ್ಲ.

4. ದಾದು ನಾಯ್ಕರವರ ಮಕ್ಕಳು, ತುಳಸೇನಾಯ್ಕು, ಬದಿಲಮ್ಮ, ಗಜ್ಜೇನಾಯ್ಕ, ನರಸೇನಾಯ್ಕ ಅಲಿಯಾಸ್ ನಾರಾಯಣ ನಾಯ್ಕ ಎಂದರೆ ಸರಿಯಲ್ಲ. ಪೀಕಲಮ್ಮ

ರವರ ಮಕ್ಕಳು ಸೀತಮ್ಮ, ಗಣೇನಾಯ್ಕು, ಗೋಮೀಲಮ್ಮ ಎಂದರೆ ಸರಿಯಲ್ಲ. ಪೀಕಲಮ್ಮ ಎಂಬುವವರು ಇಲ್ಲ. ಪೀಕಲಮ್ಮ ರವರ ಹೊಟ್ಟೆಯಲ್ಲಿ ಗೋಪಿಲಮ್ಮ ರವರು ಇರುವಾಗ ಬೀಕೆ. ನಾಯ್ಕು ರವರು ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪೀಕಲಮ್ಮ ರವರ ಗಂಡ ಮೃತ ಪಟ್ಟ ನಂತರ ಅವರು ದಾದು ನಾಯ್ಕು ರವರ ಆಶ್ರಯದಲ್ಲಿ ಇದ್ದರು ಎಂದರೆ ಇರಬಹುದು.

5. ಪೀಕಲಮ್ಮ ರವರ ಹೊಟ್ಟೆಯಲ್ಲಿ ಲಕ್ಕ್ಮೇನಾಯ್ಕು ಮತ್ತು ಸಾಂಪ್ಲೇನಾಯ್ಕು ಹುಟ್ಟಿರುತ್ತಾರೆ ಎಂದರೆ ಸುಳ್ಳು. ಪೀಕಲಮ್ಮ ರವರನ್ನು ಉದ್ದೇಶಪೂರ್ವಕವಾಗಿ ವಂಶವೃಕ್ಷದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸ. ನಂ. 96, 159/2, 239/1, 173 ಒಟ್ಟು 15 ಎಕರೆ ದಾದುನಾಯ್ಕು ರವರಿಗೆ ಸೇರಿದ್ದು. ದಾದುನಾಯ್ಕು ಇರುವಾಗ ತುಳಸೇನಾಯ್ಕು, ಸಾಂಪ್ಲೇನಾಯ್ಕು ಮತ್ತು ಲಕ್ಕ್ಮೇನಾಯ್ಕು ಇವರು ಮೂರು ಭಾಗಗಳಾಗಿ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

6. ವಿಭಾಗದ ನಂತರ ಅವರವರ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ವಿಭಾಗ ಮಾಡಿಕೊಂಡಿಲ್ಲ. ತುಳಸೇನಾಯ್ಕು, ಸಾಂಪ್ಲೇನಾಯ್ಕು ಮತ್ತು ಲಕ್ಕ್ಮೇನಾಯ್ಕು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಆಸ್ತಿಗಳ ಸಂಪಾದನೆ ಬೇರೆ ಬೇರೆಯಾಗಿತ್ತು ಎಂದರೆ ಒಟ್ಟಿಗೆ ಉಳುಮೆ ಮಾಡಿ ಬಂದ ಆದಾಯವನ್ನು ತೆಗೆದುಕೊಳ್ಳುತ್ತಿದ್ದೆವು. ನನ್ನ ತಂದೆ ಜೊತೆ ಸೇರಿಕೊಂಡು ಪ್ರತ್ಯೇಕವಾಗಿ ಬೆಂಗಳೂರಿನಲ್ಲಿ ಮನೆ ಮಾಡಿಕೊಂಡಿದ್ದೇನೆ ಎಂದರೆ ಆಗ ನಾನು ಇನ್ನು ಅಪ್ರಾಪ್ತ ವಯಸ್ಕನಾಗಿದ್ದೆ. 15 ವರ್ಷಗಳ ಹಿಂದೆ ತುಳಸೇನಾಯ್ಕು ತೀರಿಕೊಂಡಿರುತ್ತಾರೆ.

7. ತುಳಸೇನಾಯ್ಕ ಮೃತ ಪಟ್ಟಾಗ ಅವರ ತಿಥಿ ಕಾರ್ಯಗಳನ್ನು ವಾದಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮೃತ ಪಟ್ಟಾಗ ಅವರ ತಿಥಿ ಕಾರ್ಯಗಳನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿ. ಸಾಂಪ್ಲೆನಾಯ್ಕು ಮೃತ ಪಟ್ಟಾಗ ಅವರ ತಿಥಿ ಕಾರ್ಯಗಳನ್ನು 2 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿ. 1980 ಕ್ಕಿಂತ ಮೊದಲೇ 3 ಜನಗಳು ಮೃತ ಪಟ್ಟಿರುತ್ತಾರೆ

ಎಂದರೆ ಸರಿಯಲ್ಲ. ದಾದು ನಾಯ್ಕ ರವರ ಮೂರು ಜನ ಮಕ್ಕಳಿಗೂ ಪ್ರತ್ಯೇಕ ಪಡಿತರ ಚೀಟಿ ಮತ್ತು ಚುನಾವಣಾ ಚೀಟಿ ಇದೆ ಎಂದರೆ ಸರಿ.

8. ದಾವಾ ಸ್ವತ್ತು ದಾದು ನಾಯ್ಕ ರವರ ಹೆಸರಿನಲ್ಲಿ ಇರುವ ದಾಖಲೆ ನೋಡಿದ್ದೀರಾ ಎಂದರೆ, ದಾವಾ ಸ್ವತ್ತು ಅವರ ಹೆಸರಿನಲ್ಲಿ ಇರಲಿಲ್ಲ. ದಾವಾ ಸ್ವತ್ತು ವಾದಿಗೆ ಮಂಜೂರಾಗಿತ್ತುದೆ. ಸಾಕ್ಷಿ ಮುಂದುವರೆದು ನನ್ನ ತಂದೆ ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದರು ಎಂದು ನುಡಿದಿರುತ್ತಾರೆ. ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. 1978-79 ರಿಂದ ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಸ್ವಾಧೀನವನ್ನು ಪರಿಗಣಿಸಿ ವಾದಿಗೆ ಸಾಗುವಳಿ ಚೀಟಿ ನೀಡಲಾಗಿರುತ್ತದೆ ಎಂದರೆ ನಾವೆಲ್ಲರೂ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇವೆ.

9. ವಾದಿಗೆ ಸಾಗುವಳಿ ಚೀಟಿ ನೀಡುವ ಪೂರ್ವದಲ್ಲಿ ವಾದಿಯು ಸರ್ಕಾರಕ್ಕೆ 95 ರೂ. ಕಿಮ್ಮತ್ತು ಪಾವತಿಸಿರುತ್ತಾರೆ ಎಂದರೆ ಇರಬಹುದು. ಕಿಮ್ಮತ್ತು ಕಟ್ಟುವ ಪೂರ್ವದಲ್ಲಿ 19.07.1976 ರಲ್ಲಿ ಸರ್ಕಾರದವರು ವಾದಿಗೆ ನೋಟೀಸ್ ನೀಡಿದ್ದಾರೆ ಎಂದರೆ ಇರಬಹುದು. ಕಿಮ್ಮತ್ತು ನಮ್ಮ ಒಟ್ಟು ಕುಟುಂಬದದಿಂದ ಪಾವತಿಸಿರುತ್ತೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಈ ದಾವಾ ಸ್ವತ್ತು ವಾದಿಗೆ ಮಂಜೂರಾಗುವ ಕಾಲಕ್ಕೆ ನಾನು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

10. 1978-79 ದಾವಾ ಸ್ವತ್ತು ವಾದಿಗೆ ಮಂಜೂರಾದ ನಂತರ ಅವರ ಹೆಸರಿಗೆ ಖಾತೆ ಪಾಣಿ ಆಗಿದೆ ಎಂದರೆ ಸರಿ, ನಾವು ಮೂರು ಜನರು ಒಂದೊಂದು ಎಕರೆ ತೆಗೆದುಕೊಂಡು ಉಳುಮೆ ಮಾಡಿರುತ್ತೇವೆ.

**(ಈ ಹಂತದಲ್ಲಿ ಮುಂ. ಪಾಟೀ ಸವಾಲಿಗೆ ಸಮಾಯಾವಕಾಶ ನೀಡಲಾಯಿತು)**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ